

ಸುವರ್ಣದೇಶದ ಹಿಂದಿನ ರಾಜನಿಗೆ ತನ್ನ ದೇಶದ ಜನರ ಕಾವ್ಯಪ್ರೇಮದ ಪರಿಚಯ ಚೆನ್ನಾಗಿಯೇ ಇತ್ತು. ಪರಿಚಯವಷ್ಟೇ ಅಲ್ಲ, ಆತ ದೇಶದ ತುಂಬೆಲ್ಲ ಕಾವ್ಯೋತ್ಸವ, ಕಾವ್ಯನದಿ, ಕವಿತಾ ಪರ್ವತ ಮುಂತಾದ ವಿವಿಧ ಹೆಸರುಗಳಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದ, ಎಲ್ಲಾ ಕವಿಗಳಿಗೆ ದೊಡ್ಡ ದೊಡ್ಡ ಬಹುಮಾನಗಳನ್ನು ಕೊಡುತ್ತಿದ್ದ. ಸಂದರ್ಭಕ್ಕನುಸಾರವಾಗಿ ಕವಿಗಳನ್ನು ಸತ್ಕರಿಸುತ್ತಾ ಅವರೆಲ್ಲರ ಬಗ್ಗೆ ಮೃದುವಾಗಿ ವರ್ತಿಸುತ್ತಿದ್ದ. ಕವಿಗಳು ದುಃಖದ ಪರ್ವತಗಳ ಬಗ್ಗೆ ವೇದನೆಯ ನದಿಗಳ ಬಗ್ಗೆ ಕವಿತೆ ಬರೆಯುತ್ತಾ ಇದಕ್ಕೆಲ್ಲ ರಾಜರೇ ಕಾರಣ ಎಂದು ಹೇಳುತ್ತಿದ್ದರು.

ಆತ ರಾಜನೇನೋ ಆಗಿದ್ದ. ಆದರೆ ಈಗ ಕಾಲ ಬದಲಾಗಿದೆ ಎಂಬುದು ಅವನಿಗೂ ತಿಳಿದ ಸಂಗತಿಯೇ ಆಗಿತ್ತು. ಈಗಂತೂ ಹಿಂದಿನ ರಾಜರ ಕಾಲದ ವಾತಾವರಣವೇನಿರಲಿಲ್ಲ. ರಾಜರು ತಮ್ಮ ಪ್ರೀತಿಯ ಕವಿಗಳ 'ಕಾವ್ಯ ದರ್ಬಾರು' ನಡೆಸುತ್ತಿರಲಿಲ್ಲ. ಕವಿಗಳು ರಾಜರನ್ನು ಹೊಗಳುತ್ತಲೂ ಇರಲಿಲ್ಲ. ರಾಜ ಇನಾಮುಗಳನ್ನು ಕೊಡುತ್ತಿರಲಿಲ್ಲ. ಈಗ ಹೊಸ ರಾಜತಂತ್ರ ಶುರುವಾಗಿ ಬಿಟ್ಟಿತ್ತು. ಈ ರಾಜ ತಂತ್ರದಲ್ಲಿ ಪ್ರಜೆಗಳು ಚುನಾವಣೆಯ ಮೂಲಕ ನೇರವಾಗಿ ರಾಜನನ್ನು ಆರಿಸುತ್ತಿದ್ದರು. ಆ ಭ್ರಮೆಯನ್ನು ಆತನಲ್ಲಿ ತುಂಬಿಸಲಾಗುತ್ತಿತ್ತು. ಹೀಗಿರುವಾಗ ರಾಜ ಜನರ ಭಾವನೆಗನುಗುಣವಾಗಿ ಪ್ರಜೆಗಳನ್ನು ಆದರಿಸುತ್ತಿದ್ದ. ಕವಿಗಳು ಸಹ ರಾಜನನ್ನು ಗೌರವಿಸುತ್ತಿದ್ದರು. ಈ ಅಂಶ ಕವಿತೆಯ ಮನೆಯಲ್ಲಿರುವ ಕವಿಗಣಗಳೆಲ್ಲರಿಗೂ ಖುಷಿ ನೀಡುತ್ತಿತ್ತು.

ಹೊಸದಾಗಿ ಆರಿಸಿ ಬಂದ ರಾಜನು ಸಹ ವಿಶೇಷ ಕವಿ ಮತ್ತು ಕಾವ್ಯ ನಾಯಕರನ್ನು ಆರಾಧಿಸುತ್ತಿದ್ದ. ಸುವರ್ಣ ದೇಶದ ಜನತೆ ರಾಜನನ್ನು ಕಾವ್ಯಪ್ರೇಮಿ ಎಂದು ಪರಿಗಣಿಸುತ್ತಿದ್ದುದು ಸಾಮಾನ್ಯ ದೃಶ್ಯವಾಗಿಬಿಟ್ಟಿತ್ತು. ಹೀಗಾಗಿ ಬಹಳ ದಿನಗಳ ತನಕ ಪ್ರಜೆಗಳು ರಾಜನ ಪ್ರೀತಿಯ ಕವಿತೆಗಳಲ್ಲಿ ಮುಳುಗಿ ಹೋಗಿಬಿಟ್ಟರು. ಇದೊಂದು ಸ್ವಯಂಸ್ಫೂರ್ತಿಯ ಉತ್ಸವವಾಗಿ ಒಂದು ಮಾಯಾವಿ ಉತ್ಸವದಂತಾಗಿಬಿಟ್ಟಿತು. ನೋವಿನ ನದಿಗಳಲ್ಲಿ ಪ್ರವಾಹ ಉಕ್ಕೇರಿತು. ಅತ್ತ ಪರ್ವತಗಳು ಎತ್ತರೆತ್ತರಕ್ಕೆ ಬೆಳೆದು ಸೂರ್ಯನ ಬೆಳಕು ಈ ದೇಶದ ಮೇಲೆ ಬೀಳದ ಹಾಗೆ ತಡೆಯಲಾರಂಭಿಸಿದವು.

ಇಷ್ಟಾದರೂ ಜನತೆ ಸಂತೋಷವಾಗಿಯೇ ಇದ್ದರು. ನೋವಿನ ನದಿಗಳಲ್ಲಿ ಪ್ರವಾಹ ಬಂದು ಸಾರಯುಕ್ತ ಮಣ್ಣು ಹರಿದು ಇಕ್ಕೆಲದ ಜಮೀನು ಫಲವತ್ತಾಗುತ್ತದೆ. ಹಾಗೆಯೇ ದುಃಖದ ಪರ್ವತಗಳು ಎತ್ತರವಾಗುವುದರಿಂದ ಸುಡುಬಿಸಲಿನಿಂದ ನಾವು ತಪ್ಪಿಸಿಕೊಳ್ಳಬಹುದೆಂದು ಅವರು ನಂಬಿದ್ದರು. ಆದರೆ ಈ ಉತ್ಸವಕ್ಕೆ ಮಧ್ಯದಲ್ಲಿಯೇ ಅಡ್ಡಿ ಉಂಟಾಯಿತು. ಕವಿಗಳ ಒಂದು ವರ್ಗ ಪ್ರಾರಂಭದಿಂದಲೇ ಹೊಸ ರಾಜನನ್ನು ಸಂಶಯದ ದೃಷ್ಟಿಯಿಂದ ನೋಡುತ್ತಿತ್ತು. ಹೊಸ ರಾಜ ತೆಗೆದುಕೊಂಡ ನಿರ್ಣಯಗಳಿಂದಾಗಿ ಹೆಚ್ಚಿನ ಕವಿಗಳಿಗೆ ನಿದ್ರೆಯೇ ಇಲ್ಲದಂತಾಯಿತು.

ಹಾಂ., ಕವಿಗಳಿಗೆ ನಿದ್ರೆ ಹತ್ತುವುದೇ ಕಡಿಮೆ ಎಂಬುದು ಹಳೆಯ ಮಾತು. ರಾಜನಿಗೆ ಈ ಅಂಶವು ತಿಳಿದಿರಲಿಲ್ಲ. ವ್ಯಥೆಯ ನದಿಗಳು ಉಕ್ಕಿ ಹರಿಯಲು ಮತ್ತು ದುಃಖದ ಪರ್ವತಗಳು ಎತ್ತರಕ್ಕೆ ಬೆಳೆಯಲು ರಾಜನೇ ಕಾರಣ ಎಂದೆಲ್ಲ ಪ್ರಚಾರ ಮಾಡುತ್ತ ಆ ಕುರಿತು ಕವಿತೆಗಳನ್ನು ಬರೆಯತೊಡಗಿದರು ಮತ್ತು ಗೀತೆಗಳನ್ನು ರಚಿಸಿ ಹಾಡತೊಡಗಿದರು. ಇದರಿಂದ ಹೊಸ ರಾಜ ಹುಚ್ಚನಂತಾಗಿಬಿಟ್ಟ. ಮೊದಲಿಗೆ ರಾಜ ಆ ಕವಿಗಳ ಕಡೆಗೆ ಗಮನ ನೀಡದೆ ಕಡೆಗಣಿಸಿದ್ದ. ಆದರೆ ಅವರು ರಾತ್ರಿಯೆಲ್ಲ ಎಚ್ಚರವಾಗಿದ್ದು ಕವಿತೆಯನ್ನು ಬರೆಯತೊಡಗಿದ್ದುದ್ದರಿಂದ ಆತ ಇನ್ನೂ ತಳಮಳಗೊಂಡ.

ಹೊಸ ರಾಜ ಧೈರ್ಯವಂತನಾಗಿರಲಿಲ್ಲ. ಹಾಗಾಗಿ ಅಶಾಂತಗೊಂಡ ಆತ ಒಂದು ದಿನ ಕವಿಗಳ ವಿರುದ್ಧ ಒಂದು ಹೇಳಿಕೆಯನ್ನು ಜಾರಿ ಮಾಡಿ, 'ಪ್ರಜೆ ನೈಜವಾದ ಆಸೆ ಆಕಾಂಕ್ಷೆಗಳನ್ನು ಹತ್ತಿಕ್ಕಿ ಮಾಯಾವಿ ಉತ್ಸವಕ್ಕೆ ಅಡಚಣೆ ಉಂಟುಮಾಡುವ ಅಧಿಕಾರ–ಹಕ್ಕು ಕವಿಗಳಿಗೆ ಇರುವುದಿಲ್ಲ' ಎಂದು ಆಜ್ಞೆ ಹೊರಡಿಸಿದ. ಇಷ್ಟಾದರೂ ಕವಿಗಳು ರಾತ್ರಿ ಇಡೀ ಕವಿತೆ ಬರೆಯುವುದು ನಿಲ್ಲಲಿಲ್ಲ. ರಾಜ ಕೋಪದಿಂದ ಕುದಿಯತೊಡಗಿದ. ತನ್ನ ಆಜ್ಞೆಗೆ ಕವಡೆ ಕಿಮ್ಮತ್ತು ಸಹ ಸಿಗದಿರುವುದಕ್ಕೆ ಸಿಡಿಮಿಡಿಗೊಂಡ.

ರಾಜ ಎಲ್ಲಾ ಕವಿಗಳನ್ನು ಇನ್ನೇನು ಬಂಧಿಸಬೇಕು ಎನ್ನುವಷ್ಟರಲ್ಲಿ ಆತನ ಬಳಿಗೆ ಗುಪ್ತ ಮಂತ್ರಿ ಬಂದ. 'ಇಂತಹ ಸಮಸ್ಯೆಗಳನ್ನು ರಾಜನೀತಿಯ ಆಧಾರದ ಮೇಲೆಯೇ ಪರಿಹರಿಸಬೇಕು' ಎಂದು ಸಲಹೆ ನೀಡಿದ. ಗುಪ್ತಮಂತ್ರಿಯ ಸಲಹೆ ಮೇರೆಗೆ